ನೋಡಿದಾಗ ತಾನು ಏನು ಮಾಡಿದೆ ಎನ್ನುವುದು ಗೊತ್ತಾಗಿ ಬಿಡುತ್ತದೆ.

ಕವಳೆಕಾರ ಕುಂದಾಳ ಬಾಸ್. ಅವನು ಕೂಡ ಒಳ್ಳೆಯ ಮನುಷ್ಯ. ಕಾಣಲು ಕಟ್ಟುಮಸ್ತಾದ ದೇಹ. ಅವನಿಗೆ ಎರಡು ಮಕ್ಕಳು. ಕವಳೆಕಾರ ಒಳ್ಳೆಯವನು, ಅವನ ಹೆಂಡತಿ ಒಳ್ಳೆಯವಳು, ಮಕ್ಕಳು ಒಳ್ಳೆಯವರು, ಸಂಸಾರ ಸುಖಭರಿತ. ಬಾಸ್ ಆಗಿದ್ದರೂ ಎಂದೂ ಯಾರ ಮೇಲೆಯೂ ಅಧಿಕಾರ ಚಲಾಯಿಸುವ ವ್ಯಕ್ತಿ ಅಲ್ಲ. ಕುಂದಾಳ ಸುಪ್ತ ಮೌನಕ್ಕೆ ಅವನು ಮೆಲ್ಲಗೆ ಗಾಳಿಯೂದಿ ಎಬ್ಬಿಸಿದ. ಏಕಾಂಗಿತನಕ್ಕೆ ಸಾಂಗತ್ಯದ ಬೆಂಬಲ ನೀಡಿದ. ಹೀಗೆ ಯಾವಾಗಲೋ ಒಮ್ಮೆ ಅವನು ಕಾರಿನಲ್ಲಿ ಕುಂದಾಳನ್ನು ಮನೆಗೆ ತಲುಪಿಸಲು ಬಂದ... ಆಮೇಲೆ ಬರುತ್ತಲೇ ಇದ್ದ.

ಕುಂದಾ ಮತ್ತು ಕವಳೆಕಾರ ಇಬ್ಬರೂ ಒಳ್ಳೆಯ ಮನುಷ್ಯರು. ಹದ್ದುಬಸ್ತಿನಲ್ಲಿ ಇರುವವರು. ಆದರೂ ತಪ್ಪಿದರು... ತಪ್ಪು ಮಾಡುತ್ತಾ ಹೋದರು. ಗೊತ್ತಿಲ್ಲದೆ ಅಲ್ಲ... ತಿಳಿದು, ಅರ್ಥ ಮಾಡಿಕೊಂಡು. ಮನುಷ್ಯನ ಹಸಿವು ಬೇರೆ ಬೇರೆ ರೀತಿ ಇರುತ್ತದೆ ಎನ್ನುವುದು ಸತ್ಯ!

ವಕ್ರ ದಾರಿಯಲ್ಲಿ ಹೆಜ್ಜೆ ಹೆಜ್ಜೆಗೆ ಕಲ್ಲುಗಳು. ಎಡವಿ ಬೀಳದವರೆಗೆ ದಾರಿ ಸರಳವಾಗಿ ಕಂಡು ಬರುತ್ತದೆ. ಎಡವಿದ ಬಳಿಕ ತಾನು ಎಲ್ಲಿಗೆ ಬಂದು ನಿಂತಿದ್ದೇನೆ ಎನ್ನುವುದು ತಿಳಿಯುತ್ತದೆ.

ದೀಪದ ಬೆಳಕಿಗೆ ಮರೆಯಾಗಿಸಿಟ್ಟ ಪ್ರಶ್ನೆ ಕುಂದಾಗೆ ಗೋಚರಿಸಲಾರಂಭಿಸಿದೆ. ಈಗ ಅದು ಬೆಳಕಿನಲ್ಲಿಯೂ ಬಿಂದಾಸ್ ತಿರುಗಾಡಲು ಪ್ರಾರಂಭಿಸಿದೆ.

ರಾತ್ರಿಯ ವಿಚಾರ ಬೇರೆ. ವಿಧವಿಧದ ಸುದ್ದಿಗಳನ್ನು ಹೊತ್ತು ತರುವ ವೃತ್ತಪತ್ರಿಕೆಗಳು ರಾತ್ರಿ ಇರುವುದಿಲ್ಲ. ಕ್ಷಣಕ್ಷಣದ ಗಾಡಿಯನ್ನು ತಳ್ಳುತ್ತಾ ಲೋಕಲ್ ಹಿಡಿಯಲು ಓಡುವುದು ಇರುವುದಿಲ್ಲ. ರಾತ್ರಿ ಹೊತ್ತು ಜೊತೆ ನೀಡಲು ಜನಸಂದಣಿಯ ಹಬೆ ಇರುವುದಿಲ್ಲ. ಅದೇನಾದರೂ ಇರುವುದಾದರೆ ಒಂಟಿಯಾಗಿ ಉಳಿಯುವ ಏಕಾಂಗಿತನ ಮತ್ತು ವಿಧವಿಧದ ಚಿಂತೆಗಳು ಇರುತ್ತವೆ.

ಮನೆಯಲ್ಲಿ ಒಬ್ಬಳೇ ಇರುವ ಅಮ್ಮನದು...

ಕಂಡೂ ಕಾಣದಂತಿರುವ ತನ್ನ ಭವಿಷ್ಯದ್ದು...

ದೇಹದ ಹಸಿವೆಯದು...

ಉತ್ತರವಿಲ್ಲದ ಪ್ರಶ್ನೆಗಳದು...

ಸಾವಿರ ಹೆಡೆಗಳ ಸಹಸ್ರ ನಾಗ ಭುಸುಗುಟ್ಟುತ್ತಾ ಚಿಂತೆಯ ಪೂತ್ಕಾರವನ್ನು ಬಿಡುತ್ತದೆ ಮತ್ತು ಇಡೀ ರಾತ್ರಿ ವಿಕಳವಾಗುತ್ತದೆ. ಆಮೇಲೆ ಆ ಗಾಢ ರಾತ್ರಿಯಲ್ಲಿ ಉಳಿಯುವುದು ತನ್ನ ಅಸ್ತಿತ್ವದ ದೀರ್ಘ ರಸ್ತೆ ಮಾತ್ರ. ಅದರ ಮೇಲೆ ಅನಂತರ ಉಸಿರಿನ ಹೆಡ್‌ಲೈಟ್ ಉರಿಸುತ್ತಾ, ಭೂತಕಾಲದ ನೆರಳುಗಳನ್ನು ಹಿಂದೆ ಸರಿಸುತ್ತಾ, ಎಷ್ಟೇ ವೇಗವಾಗಿ ತಿಳಿವಳಿಕೆಯ ಗಾಡಿಯನ್ನು ಚಲಾಯಿಸಿದರೂ ಆ ರಸ್ತೆ ಮುಗಿದು ಮುಗಿಯುವುದಿಲ್ಲ. ಮೌನಗೀನವೆಲ್ಲವೂ ಮುಂದೆ ಮುಂದೆ ಸರಿಯುತ್ತಲೇ ಇರುತ್ತದೆ. ಇನ್ನು ಆ ಕತ್ತಲೆಯಲ್ಲಿ ಪ್ರಾಯಶಃ ಅಂಕುಡೊಂಕಿನ ಶಾಖೆಗಳನ್ನು ಬಿಟ್ಟಿರುವ ಅಶಕ್ತ ಗಿಡ ದೀಪದ ಹುಳುಗಳಿಂದ ಲಕಲಕಿಸುವ ಹಾಗೆ ಸತ್ತರೂ ಸಾಯದ ಹಾಗಿರುವ ಸಾವಿರಾರು ಬಯಕೆಗಳ, ಆಸೆಗಳ, ಅಪೇಕ್ಷೆಗಳ ಕನಸುಗಳು ಕುಂದಾಳ ಮನಸ್ಸಿನಲ್ಲಿ ಹೊಳೆಯುತ್ತಿರುತ್ತವೆ. ಅಳಿಸಿ ಹೋಗುವ ದಾರಿ ನೋಡುತ್ತಿದ್ದರೂ ಉರಿದೇ ಉಳಿಯುವುದು ಇಂತಹ ಬಯಕೆಯ ಬಾಲಗೀತೆ.

ರಾತ್ರಿ ಮುಗಿಯುವುದೇ ಇಲ್ಲ. ವಕ್ರ ರಸ್ತೆಯ ವಕ್ರ ಬಳ್ಳಿಗೆ ಈಗ ಫಲ ಮೂಡಿದೆ. ಇಲ್ಲಿಯವರೆಗೆ ಯಾವ ಮರದ ಆಧಾರ ಪಡೆದು ಹತ್ತಿದಳೋ, ಆ ಮರದ ಆಧಾರ